ಕ್ರ.ಸ. ೨೬

**<u>ಮಾನ್ಯ ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಸರ್ಕಾರದ ಹೇಳಿಕೆ.</u>**

**ವಿಷಯ:**

ಯುಜಿ ಕೋರ್ಸಗಳಿಲ್ಲಿದೇ ಪಿ.ಜಿ. ಕೋರ್ಸ್‌ಗಳನ್ನು ನಡೆಸುತ್ತಿರುವ ಎಲ್ಲಾ ಕಾಲೇಜು/ಸಂಸ್ಥೆಗಳ ಸಂಯೋಜನೆಯನ್ನು ಕೂಡಲೇ ಹಿಂಪಡೆದು ಸದರಿ ಕಾಲೇಜು / ಸಂಸ್ಥೆಗಳನ್ನು ಮುಚ್ಚಲು ಮಾನ್ಯತೆ ರದ್ದುಪಡಿಸಲು ಕ್ರಮವಹಿಸುವಂತೆ ಸೂಚಿಸಲಾಗಿದೆ. ಆದರೆ ಗುಲ್ಬರ್ಗಾ ವಿಶ್ವವಿದಾಲಯವು 2007-08 ನೇ ಶೈಕ್ಷಣಿಕ ಸಾಲಿನಿಂದ ಇಂದಿನವರೆಗೂ ಸಾಂಪ್ರದಾಯಿಕ ಕೋರ್ಸ್‌ಗಳಾದ ಎಂ.ಎ, ಎಂ.ಕಾಂ, ಎಂ.ಎಸ್ಸಿ ಗಳನ್ನು ಹೊರತುಪಡಿಸಿ ಎಂ.ಎಸ್.ಡಬ್ಲ್ಯೂ ಎಂ.ಬಿ.ಎ., ಎಂ.ಸಿ.ಎ. ಎಂ.ಎಫ್.ಎ. ಹಾಗೂ ಎಂ.ಎಲ್.ಐ.ಬಿ ಕೋರ್ಸ್‌ಗಳನ್ನು ಯು.ಜಿ. ಕೋರ್ಸ್‌ಗಳು ಇಲ್ಲದಿದ್ದರೂ ಪಿ.ಜಿ. ಕೋರ್ಸ್ ಗಳನ್ನು ನಡೆಸಲು ಸಂಯೋಜನೆಗಾಗಿ ಶೈಕ್ಷಣಿಕ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಾ ಬಂದಿದೆ. ಅದರಂತೆ ಎಲ್ಲಾ ಮಹಾವಿದ್ಯಾ ಲಯಗಳು ಅಫಿಲಿಯೇಷನ್‌ಗಾಗಿ ಅರ್ಜಿ ಸಲ್ಲಿಸಿ ವಿಶ್ವವಿದ್ಯಾಲಯದ ಅನುಮೋದನೆ ಪಡೆದು ಮತ್ತು ಉನ್ನತ ಶಿಕ್ಷಣ ಇಲಾಖೆಯ ಅನುಮತಿಯೊಂದಿಗೆ ಶಿಕ್ಷಣ ಸಂಸ್ಥೆಗಳು ಪಿಜಿ, ಕೋರ್ಸ್ ಗಳನ್ನು ಪ್ರಾರಂಭಿಸಿರುತ್ತಾರೆ, ಈ ಸುತ್ತೋಲೆಯನ್ನು ಹಿಂಪಡೆಯದಿದ್ದರೆ ಈಗಾಗಲೇ ಕಾಲೇಜಿನ ಸಿಬ್ಬಂದಿಗಳಿಗೆ ಹಾಗೂ ಕಾಲೇಜಿನ ಆಡಳಿತ ಮಂಡಳಿಗೆ ತುಂಬಾ ತೊಂದರೆಯಾಗುತ್ತದೆ. ಏಕಾಏಕಿ ಕಾಲೇಜುಗಳನ್ನು ಮುಚ್ಚುವುದರಿಂದ ಸಮಾಜದಲ್ಲಿ ತಪ್ಪು ಸಂದೇಶ ರವಾನೆಯಾಗುತ್ತದೆ. ಆದ್ದರಿಂದ ಈ ಸುತ್ತೋಲೆಯ ಸಾಧಕ-ಬಾಧಕಗಳನ್ನು ಗಣನೆಗೆ ತೆಗೆದುಕೊಂಡು ಕೂಡಲೇ ಉನ್ನತ ಶಿಕ್ಷಣ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯನ್ನು ಹಿಂಪಡೆಯುವಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಈ ಮೂಲಕ ಕೋರುತ್ತೇನೆ.

**ಸರ್ಕಾರದ ಉತ್ತರ:**

PG ಕೋರ್ಸ್‌ಗಳ ಸಂಯೋಜನೆಗೆ ಸಂಬಂಧಿಸಿದಂತೆ, UGC (Affiliation of Colleges by Universities) Regulations, 2009 ರ ನಿಯಮ: 7.2 ರಲ್ಲಿ ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ;

**7. Eligibility to apply for new programmes of study:**

7.2 any proposal for raising the existing under-graduate college to post graduate studies level shall be considered by the university only after satisfactory completion of two years of the under-graduate programme and the proposed buildings, qualified faculty and other infrastructure facilities are fully created as per the Regulations

ಒಂದು ವೇಳೆ UGC (Affiliation of Colleges by Universities) Regulations, 2009 ರ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಕಾಲೇಜು ಅಥವಾ ವಿಶ್ವವಿದ್ಯಾಲಯಗಳಿಗೆ UGC (Affiliation of Colleges by Universities) Regulations, 2009 ರ ನಿಯಮ 9 ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದ್ದು, ಅದರನ್ವಯ ಕ್ರಮವಹಿಸಲಾಗುವುದೆಂದು ಈ ಮೂಲಕ ತಿಳಿಸಿದೆ.

**9. Penalties on the Universities granting affiliations to sub-standard colleges or failure of Universities/Colleges to comply with the Regulations of Commission:**

9.1 If any University grants affiliation to a college which does not fulfill the conditions/requirements for affiliation as per the Regulations, or if the University grants affiliation in contravention of the relevant provisions of the UGC Act and Regulations, the Commission may take such action as it may deem fit, including that of withholding the grants to the University and/or delisting the said University from the list of universities maintained by the Commission under Section 12B of the UGC Act.

9.2 If any college included under Section 2(f) and receiving UGC Grants under Section 12(B) is found guilty of violations of the Regulations, the Commission may take such action as it may deem fit, including that of withholding the grant to the college and/or delisting the said college from the list of colleges maintained by the Commission under Section 2(f) and/or 12(B) of the UGC Act.

UGC (Affiliation of Colleges by Universities) Regulations, 2009 ರ ನಿಯಮ: 7.2 ನಿಯಮದನ್ವಯ, ಅಸ್ತಿತ್ವದಲ್ಲಿರುವ under-graduate college ಅನ್ನು post graduate studies level ಅಂದರೆ ಸ್ನಾತಕೋತ್ತರ ಅಧ್ಯಯನದ ಮಟ್ಟಕ್ಕೆ ಉನ್ನತೀಕರಿಸಬೇಕಾದಲ್ಲಿ ವಿಶ್ವವಿದ್ಯಾಲಯವು ಪ್ರಸ್ತಾಪಿತ ಕಾಲೇಜಿನ ಕಟ್ಟಡಗಳು, ಅರ್ಹ ಅಧ್ಯಾಪಕರು ಮತ್ತು ಇತರ ಮೂಲಭೂತ ಸೌಕರ್ಯಗಳನ್ನು ನಿಯಮಾನುಸಾರ ವ್ಯವಸ್ಥಿತವಾಗಿ ಹೊಂದಿದ್ದು, ಎರಡು ವರ್ಷಗಳ Under-Graduate ಕೋರ್ಸ್‌ಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ಕಾಲೇಜುಗಳನ್ನು ಮಾತ್ರ ಪರಿಗಣಿಸಬೇಕಾಗುತ್ತದೆ. ಆದರೆ ಈ ನಿಯಮವನ್ನು ಉಲ್ಲಂಘಿಸಿ ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಕೇವಲ ಸ್ನಾತಕೋತ್ತರ ಕೋರ್ಸುಗಳನ್ನು ಬೋಧಿಸುವ ಕಾಲೇಜು/ಸಂಸ್ಥೆ ಅಸ್ತಿತ್ವದಲ್ಲಿರುತ್ತವೆ.

ಸಾಂಪ್ರದಾಯಕ ಕೋರ್ಸುಗಳನ್ನು ಹೊರತುಪಡಿಸಿ ವೃತ್ತಿಪರ ತಾಂತ್ರಿಕ ಸ್ನಾತಕೋತ್ತರ ಕೋರ್ಸುಗಳಿಗೆ AICTE ಯಿಂದ ನೇರವಾಗಿ ಅನುಮೋದನೆ ಪಡೆದು, ಪ್ರಾರಂಭಿಸಬಹುದಾಗಿರುತ್ತದೆ. ಆದರೆ ಸದರಿ ಕೋರ್ಸುಗಳಿಗೂ ಸಹ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಂದ ಪ್ರಾರಂಭಿಸಲು ಉದ್ದೇಶಿಸುವ ಕಾಲೇಜುಗಳ ಕಟ್ಟಡಗಳು, ಅರ್ಹ ಅಧ್ಯಾಪಕರು ಮತ್ತು ಇತರ ಮೂಲಭೂತ ಸೌಕರ್ಯಗಳನ್ನು ನಿಯಮಾನುಸಾರ ವ್ಯವಸ್ಥಿತವಾಗಿ ಹೊಂದಿರುವ ಕುರಿತು ವಿಶ್ವವಿದ್ಯಾಲಯಗಳು ಯುಜಿಸಿ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರದ ಅನುಮೋದನೆಗೆ ಸಲ್ಲಿಸಬೇಕಾಗಿರುತ್ತದೆ.

ರಾಜ್ಯದಲ್ಲಿನ ಉನ್ನತ ಶಿಕ್ಷಣ ವ್ಯವಸ್ಥೆ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನು ನಿವಾರಿಸಲು ಅತ್ಯುತ್ತಮ ಗುಣಮಟ್ಟದ ಉನ್ನತ ಶಿಕ್ಷಣ ನೀಡುವ ದೃಷ್ಟಿಕೋನದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2020 ರಲ್ಲಿನ ಕ್ರ.ಸಂ. 9.3(ಎ) ರಲ್ಲಿ ಈ ಕೆಳಕಂಡಂತೆ ಅವಕಾಶಗಳನ್ನು ಕಲ್ಪಿಸಲಾಗಿದೆ.

> "(ಎ) ಬೃಹತ್, ಬಹುಶಿಸ್ತೀಯ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಒಳಗೊಂಡ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಕಟ್ಟುವ ನಿಟ್ಟಿನಲ್ಲಿ ಭಾರತದಾದ್ಯಂತ ಕನಿಷ್ಠ ಒಂದು ಅಥವಾ ಪ್ರತಿ ಜಿಲ್ಲೆಯಲ್ಲಿ ಮತ್ತು ಹೆಚ್ಚು ಹೆಚ್.ಇ.ಐ.ಗಳು ಸ್ಥಳೀಯ/ಭಾರತೀಯ ಭಾಷೆಯಲ್ಲಿ ಬೋಧನಾ ಮಾಧ್ಯಮವನ್ನು ಅಥವಾ ಕಾರ್ಯಕ್ರಮವನ್ನು (ಕೋರ್ಸು) ನೀಡುವಂತಾಗಬೇಕು."

ಆದರೆ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕೇವಲ-ಸ್ನಾತಕೋತ್ತರ ಕೋರ್ಸುಗಳಿಗೆ ಮಾತ್ರ ಸಂಯೋಜನೆ ಪಡೆದುಕೊಂಡ ಸ್ನಾತಕೋತ್ತರ ಮಹಾವಿದ್ಯಾಲಯ (ಪಿ.ಜಿ. ಕಾಲೇಜು ಎಂದು ಸ್ವಯಂ ಕರೆದುಕೊಳ್ಳುವ) ಹಲವಾರು ಕಾಲೇಜುಗಳಿದ್ದು, ಈ ಕಾಲೇಜುಗಳಲ್ಲಿ Under-Graduate ಕೋರ್ಸ್‌ಗಳು ಇರುವುದಿಲ್ಲ. ಪ್ರಸ್ತುತ ಈ ಕಾಲೇಜುಗಳು ಕೇವಲ ಸ್ನಾತಕೋತ್ತರ ಕೋರ್ಸುಗಳನ್ನು ಬೋಧಿಸುವ ಕಾಲೇಜು ಅಥವಾ ಸಂಸ್ಥೆಗಳಾಗಿದ್ದು, ಅವುಗಳ ಪೈಕಿ ಸುಮಾರು ಕಾಲೇಜುಗಳು ಸಂಯೋಜನೆಗೆ ಅರ್ಜಿ ಸಲ್ಲಿಸಿ, ವಿಶ್ವವಿದ್ಯಾಲಯದ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಅನುಮೋದನೆಗಾಗಿ ಸಂಯೋಜನಾ ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ.

ಯುಜಿಸಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ನಿಯಮ ಬಾಹಿರ ಕೋರ್ಸ್‌ಗಳನ್ನು ನಡೆಸಿದ್ದಲ್ಲಿ, ವಿಶ್ವವಿದ್ಯಾಲಯಗಳ ಮಾನ್ಯತೆಗೆ ಧಕ್ಕೆಯುಂಟಾಗುವುದರಿಂದ ಹಲವಾರು ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗುತ್ತದೆಂದು ಪರಿಗಣಿಸಿ ಮತ್ತು UGC (Affiliation of Colleges by Universities) Regulations, 2009 ರ ನಿಯಮ 9ನಿಯಮವನ್ನು ಗಮನದಲ್ಲಿರಿಸಿಕೊಂಡು, ಸ್ನಾತಕೋತ್ತರ ಪದವಿ ತರಗತಿ ನಡೆಸಲು ಅಗತ್ಯವಿರುವಂತೆ ಶೈಕ್ಷಣಿಕ ಸಂಸ್ಥೆಯ ಶೈಕ್ಷಣಿಕ ಮತ್ತು ಸಂಶೋಧನಾ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಹಾಗೂ AICTE ಅನುಮೋದನೆ ಪಡೆದು ನಡೆಸುವ

ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಕೈಗೊಳ್ಳಲು ಸಂಸ್ಥೆಗಳು ಯುಜಿ ಕೋರ್ಸ್‌ಗಳನ್ನು ಪೂರ್ಣಗೊಳಿಸಬೇಕಾಗಿರುವುದು ಅತ್ಯಾವಶ್ಯವಾಗಿರುತ್ತದೆ. MSW ಸ್ನಾತಕೋತ್ತರ ಕೋರ್ಸ್‌ಗೆ ಪೂರಕವಾದ ಯಾವುದೇ ನಿರ್ದಿಷ್ಟ ಪದವಿ ತರಗತಿ ಇಲ್ಲದಿದ್ದರೂ, ಯಾವುದಾದರೂ ಪದವಿ ಕೋರ್ಸ್ ನಡೆಸಿದ ಅನುಭವ ಸಂಸ್ಥೆಗಿರಬೇಕಾಗುತ್ತದೆ. ಆದ್ದರಿಂದ, ಪಿಜಿ ಕೋರ್ಸ್‌ಗಳಲ್ಲಿ ಉತ್ತಮ ಗುಣಮಟ್ಟದ ಶೈಕ್ಷಣಿಕ ವ್ಯವಸ್ಥೆಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ಸುತ್ತೋಲೆ ಸಂ. ಇಡಿ 89 ಯುಜಿವಿ 2022, ದಿನಾಂಕ: 07.12.2022ರನ್ವಯ ಪ್ರಸ್ತುತ ಯಾವುದೇ ಯುಜಿ ಕೋರ್ಸ್‌ಗಳಿಲ್ಲದೆ ಪಿಜಿ ಕೋರ್ಸ್‌ಗಳನ್ನು ನಡೆಸುತ್ತಿರುವ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ವಿಶ್ವವಿದ್ಯಾಲಯಗಳಡಿ ಬರುವ ಎಲ್ಲಾ ಕಾಲೇಜು/ಸಂಸ್ಥೆಗಳ ಸಂಯೋಜನೆಯನ್ನು ಕೂಡಲೇ ಹಿಂಪಡೆದು, ಸದರಿ ಕಾಲೇಜು/ಸಂಸ್ಥೆಯನ್ನು ಮುಚ್ಚಲು/ಮಾನ್ಯತೆಯನ್ನು ರದ್ದುಪಡಿಸಲು ಕ್ರಮವಹಿಸುವಂತೆ ಮತ್ತು ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ PG ಕೋರ್ಸ್‌ಗಳ ಸಂಯೋಜನೆಗೆ ಸಂಬಂಧಿಸಿದಂತೆ, UGC (Affiliation of Colleges by Universities) Regulations, 2009 ರಲ್ಲಿನ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ. ಇದರಿಂದ, ವಿದ್ಯಾರ್ಥಿಗಳು ಪಡೆಯುವ ವಿದ್ಯಾಭ್ಯಾಸದ ಗುಣಮಟ್ಟ ಹಾಗೂ ಅವರ ಭವಿಷ್ಯದ ಹಿತದೃಷ್ಟಿಯನ್ನು ಕಾಪಾಡಲು ಸಹಾಯಕವಾಗುತ್ತದೆ.

ಮುಂದುವರೆದು, ಈಗಾಗಲೇ UGC (Affiliation of Colleges by Universities) Regulations, 2009 ರ ನಿಯಮ: 7.2 ನ್ನು ಉಲ್ಲಂಘಿಸಿ ಪಿಜಿ ಕೋರ್ಸ್‌ಗಳನ್ನು ನಡೆಸುತ್ತಿರುವ ಎಲ್ಲಾ ಪಿಜಿ ಕಾಲೇಜುಗಳಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳ ಭವಿಷ್ಯದ (ಉನ್ನತ ಶಿಕ್ಷಣ ವ್ಯಾಸಂಗ, ನೇಮಕಾತಿ, ಇತ್ಯಾದಿ) ಹಿತದೃಷ್ಟಿಯಿಂದ 2022-23ನೇ ಶೈಕ್ಷಣಿಕ ವರ್ಷ ಮುಗಿದ ನಂತರ ಈ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆದು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು UGC (Affiliation of Colleges by Universities) Regulations, 2009 ರ ನಿಯಮ: 7.2 ರನ್ವಯ UG ಕೋರ್ಸಿನೊಂದಿಗೆ PG ಕೋರ್ಸು ನಡೆಸುತ್ತಿರುವ ಇತರೆ ಕಾಲೇಜುಗಳು ಅಥವಾ ವಿಶ್ವವಿದ್ಯಾನಿಲಯಗಳಿಗೆ ವರ್ಗಾಯಿಸಲು ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು ಒಂದು ನಿಬಂಧನೆಯನ್ನು ರೂಪಿಸಿಕೊಳ್ಳತಕ್ಕದೆಂದು ಸೂಚನೆಯನ್ನು ಸಹ ನೀಡಲಾಗಿದೆ.

************************

ಸಂಖ್ಯೆ: ಇಡಿ 31 ಯುಎನ್‌ಇ 2023

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು